ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿರಸ್ತೆ, ಬೆಂಗಳೂರು-560023.

ದೂರವಾಣಿ:080-22879336 ಇ-ಮೇಲ್:spmbeckar@gmail.com

ಸಂಖ್ಯೆ: ಬಿಇಸಿ/ಐಪಿಜಿ/129/2020-21 ದಿನಾಂಕ: 04.10.2021

## ಸುತ್ತೋಲೆ

**ಇವರಿಗೆ**

ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು/
ಜಿಲ್ಲಾ ಶಸ್ತ್ರಚಿಕಿತ್ಸಕರು, ಬೆಂಗಳೂರು ನಗರ/
ಬೆಂಗಳೂರು ಗ್ರಾಮಾಂತರ/ಚಿತ್ರದುರ್ಗ/ದಾವಣಗೆರೆ/
ಕೋಲಾರ/ಶಿವಮೊಗ್ಗ/ಚಿಕ್ಕಬಳ್ಳಾಪುರ/ರಾಮನಗರ/
ತುಮಕೂರು/ಮೈಸೂರು/ಮಂಡ್ಯ/ಮಂಗಳೂರು(ದ.ಕ)/
ಚಾಮರಾಜನಗರ/ಕೊಡಗು/ಹಾಸನ/ಉಡುಪಿ/ಬೆಳಗಾಂ/
ಬಾಗಲಕೋಟೆ/ವಿಜಯಪುರ/ಧಾರವಾಡ/ಗದಗ/ಹಾವೇರಿ/
ಕಾರವಾರ(ಉ.ಕ.)ಚಿಕ್ಕೋಡಿ/ಗುಲ್ಬರ್ಗಾ/ಕೊಪ್ಪಳ/ಬೀದರ್/
ರಾಯಚೂರು/ಯಾದಗಿರಿ/ಬಳ್ಳಾರಿ/ಪ್ರಾಂಶುಪಾಲರು, _______________ ತರಬೇತಿ ಕೇಂದ್ರ
_______________ಜಿಲ್ಲೆ/ವೈದ್ಯಕೀಯ ಅಧೀಕ್ಷಕರು, _______________ ಆಸ್ಪತ್ರೆ,
___________________ಜಿಲ್ಲೆ/ಸಹನಿರ್ದೇಶಕರು, _______________

ವಿಷಯ : 2021-22ನೇ ಸಾಲಿಗೆ ಸೇವಾನಿರತ ವೈದ್ಯರುಗಳ ವೈದ್ಯಕೀಯ (ಎಂ.ಡಿ, ಎಂ.ಎಸ್, ಡಿಎನ್‌ಬಿ ಮತ್ತು ಸಿಪಿಎಸ್) ಸ್ನಾತಕೋತ್ತರ ವ್ಯಾಸಂಗದ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ವೈದ್ಯರುಗಳು ಉತ್ತೀರ್ಣರಾಗಿರುವ / ಅನುತ್ತೀರ್ಣರಾಗಿರುವ ಮಾಹಿತಿ ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ನ್ಯಾಷನಲ್ ಬೋರ್ಡ್‌ಆಫ್‌ಎಕ್ಸಾಮಿನೇಷನ್, (NEET-PG) NEET-2020, ಕೈಪಿಡಿ(ಬ್ರೋಚರ್). ದಿ: 23.02.2021.
2. ಆಯುಕ್ತಾಲಯದ ಸಮ ಸಂಖ್ಯೆ ಪತ್ರ ದಿ: 05.03.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ/ ಅಧಿಸೂಚನೆಯ ಪ್ರಕಾರ 2021-22ನೇ ಸಾಲಿಗೆ ವೈದ್ಯಕೀಯ ಸೇವಾನಿರತ ವೈದ್ಯರುಗಳನ್ನು (ಎಂ.ಡಿ, ಎಂ.ಎಸ್, ಡಿಎನ್‌ಬಿ ಮತ್ತು ಸಿಪಿಎಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜನೆ ಹೊಂದಲು ಪ್ರವೇಶ ಪರೀಕ್ಷೆಗೆ ಹಾಜರಾಗಲು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ, ನವದೆಹಲಿ ಇವರು ನಡೆಸುವ NEET-2019 (ವೈದ್ಯಕೀಯ) ಪ್ರವೇಶ ಪರೀಕ್ಷೆ 2021ರ ಬಗ್ಗೆ ಅಂತರ್ಜಾಲದ ಮೂಲಕ ಪ್ರಕಟಿಸಿರುವ ಕಿರುಹೊತ್ತಿಗೆಯನ್ನು NEET-2021 ವೆಬ್‌ಸೈಟ್ ವಿಳಾಸ **www.nbe.gov.in/neetpg** (Medical) ರಲ್ಲಿ ಪ್ರಕಟಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಲು ಸೂಚಿಸಿದೆ. ಹಾಗೂ ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಗಳನ್ನು ಮತ್ತು ಕಿರುಹೊತ್ತಿಗೆಯ ಪ್ರತಿಯನ್ನು ಹಾಗೂ ನಮೂನೆಗಳಲ್ಲಿ ನೀಡಬೇಕಾಗಿರುವ ಮಾಹಿತಿಯ ಬಗ್ಗೆ ಮಾದರಿ ನಮೂನೆ ಪ್ರತಿಗಳನ್ನು ಇಲಾಖೆಯ ವೆಬ್‌ಸೈಟ್ ವಿಳಾಸwww.karhfw.gov.inನಲ್ಲಿ ಪ್ರಕಟಿಸಿ ಮತ್ತು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳ ಇ-ಮೇಲ್ ವಿಳಾಸಕ್ಕೂ ಸಹ ಕಳುಹಿಸಿ ದಿನಾಂಕ: 23.03.2021 ಮತ್ತು 31.08.2021 ರೊಳಗೆ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿತ್ತು.

ಮುಂದುವರೆದು ಈ ಕಛೇರಿಗೆ ಸಲ್ಲಿಸಿರುವ ಅರ್ಜಿಗಳನು ಪರಿಶೀಲಿಸಲಾಗಿ, ಕೆಲವು ವೈದ್ಯರ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಬಗ್ಗೆ ಮಾಹಿತಿ ಹಾಗೂ ಯನ್ನು ಸಲ್ಲಿಸಿರುವುದಿಲ್ಲ. ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗದೇ ಇರುವ ವೈದ್ಯರು ತುರ್ತಾಗಿ ಮಾಹಿತಿ ಹಾಗೂ ವೈದ್ಯರುಗಳು ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಹಾಗೂ ಅನುತ್ತೀರ್ಣರಾಗಿರುವ ಬಗ್ಗೆ ಮಾಹಿತಿಯನ್ನು ಈ ಕೂಡಲೇ ಸಲ್ಲಿಸಲು ತಿಳಿಸಿದೆ. ಒಂದು ವೇಳೆ ಖಾಯಂ ಪೂರ್ವ ಸೇವಾವಧಿ ಘೋಷಣೆ ಆಗಿರುವ ಪ್ರತಿ ಹಾಗೂ ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಹಾಗೂ ಅನುತ್ತೀರ್ಣರಾಗಿರುವ ಬಗ್ಗೆ ಸಲ್ಲಿಸದೇ ಇದ್ದಲ್ಲಿ ನಿಮ್ಮ ಅರ್ಜಿಯು ತಿರಸ್ಕೃತಗೊಳ್ಳುತ್ತದೆ. ಸದರಿ ಮಾಹಿತಿಯನ್ನು **ದಿನಾಂಕ: 05.10.2021 ರ ಸಂಜೆ:5:00 ಗಂಟೆಯ ಒಳಗಾಗಿ ಆಯುಕ್ತಾಲಯ, ಬಾಂಡ್ ಎನ್‌ಫೋರ್ಸ್‌ಮೆಂಟ್ ಸೆಲ್ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, 5ನೇ ಮಹಡಿ, ಪೂರ್ವವಿಭಾಗ, ಆರೋಗ್ಯ ಸೌಧ, ಮಾಗಡಿರಸ್ತೆ, ಬೆಂಗಳೂರು-560023,** ಇಲ್ಲಿ ಮುದ್ದಾಂ ಸಲ್ಲಿಸುವುದು.

**ಮುಖ್ಯ ಆಡಳಿತಾಧಿಕಾರಿಗಳು,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು.**